ಡಿ-72-(08)

## ಕರ್ನಾಟಕ ವಿಧಾನ ಪರಿಷತ್ತ್

**ಕರೋನಾ ವೈರಸ್‌ಗೆ ಸಂಬಂಧಿಸಿದಂತೆ ಔಷಧಿಯು ದೊರಕುವ ಕೊನೆಯ ಹಂತದಲ್ಲಿರುವುದಾಗಿ ವರದಿಯಾಗಿದ್ದು, ಇದರ ಸಂಗ್ರಹಕ್ಕಾಗಿ ಎಲ್ಲಾ ರಾಜ್ಯಗಳಿಗೆ ಮಾನ್ಯ ಪ್ರಧಾನ ಮಂತ್ರಿಗಳು ಕ್ರಮ ಕೈಗೊಳ್ಳಲು ಈಗಾಗಲೇ ಸೂಚನೆ ನೀಡಿದ್ದು, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಇದರ ಸಂಗ್ರಹಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರಿಂದ 72ನೇ ನಿಯಮದ ಮೇರೆಗೆ ಕೋರಿರುವ ಮಾಹಿತಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ:-**

ಕೊರೋನಾ-19 ಸಾಂಕ್ರಾಮಿಕವನ್ನು ಗುಣಪಡಿಸುವ ಲಸಿಕೆಯನ್ನು ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಮೊದಲ ಆದ್ಯತೆಯಾಗಿ ಸರ್ಕಾರಿ ಮತ್ತು ಖಾಸಗಿ ವಲಯದ ಆರೋಗ್ಯ ಕಾರ್ಯಕರ್ತರಿಗೆ ವಿತರಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಸದರಿ ಪ್ರಕ್ರಿಯೆಯಾಗಿ ಸರ್ಕಾರಿ ವಲಯದ 2,24,083 ಮತ್ತು ಖಾಸಗಿ ವಲಯದ 2,45,773 ಆರೋಗ್ಯ ಕಾರ್ಯಕರ್ತರನ್ನು ನೋಂದಾಯಿಸಲಾಗಿದೆ ಮತ್ತು ಕೋವಿನ್ ತಂತ್ರಾಂಶದಲ್ಲಿ ಇಂದೀಕರಿಸುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಕೋವಿಡ್ ಲಸಿಕೆ ನೀಡಲು ಸಂಭಾವ್ಯ ಲಸಿಕೆ ನೀಡುವವರನ್ನು ಸರ್ಕಾರಿ ವಲಯ (68317) ಮತ್ತು ಖಾಸಗಿ ವಲಯ (35310)ಗಳು ಸೇರಿದಂತೆ ಗುರುತಿಸಲಾಗಿದೆ. ಭಾರತ ಸರ್ಕಾರದಿಂದಲೇ ಲಸಿಕೆಗಳು ಪೂರೈಕೆಯಾಗಲಿದ್ದು, ಲಸಿಕೆಗಳ ಹಾಗೂ ಸಿರಿಂಜ್‌ಗಳ ಶೇಖರಣೆ, ವಿತರಣೆ ಮತ್ತು ನಿರ್ವಹಣೆಗಾಗಿ ಸಜ್ಜುಗೊಳಿಸಲಾಗುತ್ತಿದೆ.

ರಾಜ್ಯಮಟ್ಟದ ಚಾಲನಾ ಸಮಿತಿ ಸಭೆ, ರಾಜ್ಯ ಮಟ್ಟದ ಕಾರ್ಯಪಡೆ ಸಭೆಗಳು, ಜಿಲ್ಲಾ ಮಟ್ಟದ ಕಾರ್ಯಪಡೆ ಸಭೆಗಳು ಮತ್ತು ತಾಲ್ಲೂಕು ಕಾರ್ಯಪಡೆ ಸಭೆಗಳು ನಡೆದಿವೆ.

ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಲಭ್ಯವಿರುವ ಶೀತಲ ಸರಪಣಿ ಉಪಕರಣಗಳಲ್ಲದೆ ಕೋವಿಡ್ ಲಸಿಕೆ ಶೇಖರಣೆಗಾಗಿ 395 ಡೀಫ್ ಫ್ರೀಜರ್, 15 ಲಸಿಕಾ ವಾಹನ, 2 ರೆಫ್ರಿಜರೇಟಡ್ ಲಸಿಕಾ ವಾಹನ, 3 ವಾಕ್ ಇನ್ ಫ್ರೀಜರ್ ಒದಗಿಸಲು ಹಾಗೂ ಬೆಂಗಳೂರು ನಗರ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ವಿಭಾಗೀಯ ಮಟ್ಟದ ಲಸಿಕಾ ಉಗ್ರಾಣ ಮಾಡಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಶೀತಲ ಸರಪಣಿ ಸಾಮರ್ಥ್ಯ ಅಭಿವೃದ್ಧಿಗಾಗಿ ಇತರೆ ಇಲಾಖೆಗಳಲ್ಲಿ ಎಲ್ಲಾ ಹಂತಗಳಲ್ಲಿ ಲಭ್ಯವಾಗಬಹುದಾದ ಶೀತಲ ಮತ್ತು ಒಣ ಶೇಖರಣಾ ಸಾಮರ್ಥ್ಯದ ಮಾಹಿತಿಯನ್ನು ಪಡೆಯಲಾಗುತ್ತಿದೆ.

**ಸಂಖ್ಯೆ: ಆಕುಕ 68 ಎಸ್‌ಟಿಕ್ಯೂ 2020**

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು